

# ಜನಪ್ರಿಯ ನಾಯಿಮರಿ

ಈ ಐದೂವರೆ ವರ್ಷ ವಯಸ್ಸಿನ ಪೊಮೇರಿಯನ್ ನಾಯಿಮರಿ ನಿಮಗಿಂತಲೂ ಹೆಚ್ಚು ಜನಪ್ರಿಯ! ಯಾಕೆಂದರೆ ಈ ನಾಯಿಮರಿಗೆ ಸೋಷಿಯಲ್ ನೆಟ್‌ವರ್ಕ್ ಫೇಸ್‌ಬುಕ್‌ನಲ್ಲಿ ಬರೋಬ್ಬರಿ 44 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳಿದ್ದಾರೆ!

ಈ ಸಾಕುನಾಯಿಯ ಹೆಸರು ಬೂ. ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ ಜೆ.ಎಚ್.ಲೀ ಇದರ ಒಡತಿ. ಅದು ಆಕೆಯ ನಿಜ ಹೆಸರಲ್ಲ; ಗುಪ್ತನಾಮ! ಬೂ ತುಂಬ ಸುಂದರವಾಗಿದ್ದುದರಿಂದ ಸ್ನೇಹಿತರೆಲ್ಲ ಅದನ್ನು ಮೆಚ್ಚಿಕೊಳ್ಳುತ್ತಿದ್ದರು. 2009ರಲ್ಲಿ ಒಂದು ದಿನ ಫೇಸ್‌ಬುಕ್‌ನಲ್ಲಿ ಈ ನಾಯಿಮರಿಯ ಪ್ರತ್ಯೇಕ ಪುಟ ಆರಂಭಿಸಿ ಫೋಟೋ ಹಾಕಿದಳು. ಮೊದಲ ದಿನದಿಂದಲೇ ಸಾವಿರಾರು ಜನ ಮೆಚ್ಚಿ ಇಮೇಲ್ ಕಳಿಸತೊಡಗಿದರು. ತಮಾಷೆಗೆಂದು ಆರಂಭವಾದ ಫೇಸ್‌ಬುಕ್ ಪುಟ ಪರ್ಮನೆಂಟ್ ಆಯಿತು. ಪ್ರತಿ ವಾರವೂ ಹೊಸ ರೀತಿಯ ಫೋಟೋ ಸೆಶನ್ ಮಾಡಿ ನಾಯಿಮರಿಯ ಫೋಟೋಗಳನ್ನು ಅಪ್‌ಲೋಡ್ ಮಾಡುವುದು ಶುರುವಾಯಿತು. ಇದೀಗ ಜಗತ್ತಿನ ಅತ್ಯಂತ ಜನಪ್ರಿಯ ಫೇಸ್‌ಬುಕ್ ಪುಟವಾಗಿದೆ.

ಹಲವಾರು ಹಾಲಿವುಡ್ ಸೆಲೆಬ್ರೆಟಿಗಳ ಮನಸ್ಸನ್ನೂ ಗೆದ್ದಿರುವ ಈ ಗಂಡು ನಾಯಿಮರಿ ಇಷ್ಟೊಂದು ಮುದ್ದಾಗಿ ಕಾಣುವುದಕ್ಕೆ ಮುಖ್ಯ ಕಾರಣ ಇದರ ಹೇರ್ ಕಟ್ ಅಂತೆ. ಬ್ಯೂಟಿ ಪಾರ್ಲರ್‌ಗೆ ಮೊದಲ ಬಾರಿ ತಲೆಕೂದಲ ವಿನ್ಯಾಸಕ್ಕೆ ಕರೆದೊಯ್ದಾಗ ಅಲ್ಲಿದ್ದಾತ, 'ಇದರ ಕೂದಲು ಬಹಳ ಗಂಟು ಗಂಟಾಗಿದೆ, ಬ್ರಶ್ ಮಾಡಲೂ ಸಾಧ್ಯವಿಲ್ಲ' ಎಂದಿದ್ದನಂತೆ. ಆದರೆ ಹೇರ್‌ಕಟ್ ಮಾಡಿಸಿದ ಮೇಲೆ ಬೂ ಮೊದಲಿಗಿಂತಲೂ ಬಲು ಮುದ್ದಾಗಿ ಕಾಣತೊಡಗಿತಂತೆ.

ಇದೀಗ ಈ ನಾಯಿಯ ಒಡತಿ 'ಬೂ, ದಿ ಲೈಫ್ ಆಫ್ ದಿ ವರ್ಲ್ಡ್ಸ್ ಕ್ಯೂಟೆಸ್ಟ್ ಡಾಗ್' ಎಂಬ ಪುಸ್ತಕ ಪ್ರಕಟಿಸುವುದರಲ್ಲಿ ಬ್ಯುಸಿ. ಒಡತಿಗೆ ಬೇಕಾದಂತೆ ವಿಭಿನ್ನ ಡ್ರೆಸ್‌ಗಳಲ್ಲಿ ಫೋಟೋಸೆಶನ್ ಮಾಡಿಸಿಕೊಳ್ಳುವುದರಲ್ಲಿ ಬೂ ಕೂಡಾ ಬ್ಯುಸಿ. ಪುಸ್ತಕ ಹಾಟ್ ಸೇಲ್ ಆಗುವುದರಲ್ಲಿ ಎರಡು ಮಾತಿಲ್ಲ ಎನ್ನುತ್ತಾರೆ ಲೀ.

■ ವಿದ್ಯಾ ವಿ ಹಾಲಭಾವಿ



